# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

## ಚುಕ್ಕೆ ರಹಿತ ಪ್ರಶ್ನೆ

ದಿನಾಂಕ : 22-03-2021 ಪ್ರಶ್ನೆ ಸಂಖ್ಯೆ : 1563 (1839)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರ ನೀಡಬೇಕಾದ ದಿನಾಂಕ : 22-03-2021

ಉತ್ತರಿಸುವ ಸಚಿವರು : ಪ್ರವಾಸೋದ್ಯಮ ಮತ್ತು ಪರಿಸರ ಮತ್ತು ಜೀವಿ ಪರಿಸ್ಥಿತಿ ಸಚಿವರು

ವಿಷಯ : ಸಿ ಆರ್ ಜೆಡ್ ಮತ್ತು ಅದರ ವ್ಯಾಪ್ತಿಯಲ್ಲಿನ ಕಾಂಡ್ಲಾವನಗಳ ಕುರಿತು

(ಅ) ರಾಜ್ಯದಲ್ಲಿ ಸಿ ಆರ್ ಜೆಡ್ ಕಾಯಿದೆಯ ವ್ಯಾಪ್ತಿಗೆ ಒಳಪಡುವ ಪ್ರದೇಶದ ಒಟ್ಟು ವಿಸ್ತೀರ್ಣವೆಷ್ಟು ; ಯಾವ ಜಿಲ್ಲೆಗಳು ಮತ್ತು ಗ್ರಾಮಗಳು ಈ ಸಿ ಆರ್ ಜೆಡ್ ವ್ಯಾಪ್ತಿಯಲ್ಲಿ ಬರುತ್ತದೆ; (ಜಿಲ್ಲಾವಾರು ಮತ್ತು ಗ್ರಾಮವಾರು ಮಾಹಿತಿ ನೀಡುವುದು) ಸಿ ಆರ್ ಜೆಡ್ ಪ್ರದೇಶದ ಗುರುತಿಸುವಿಕೆಗೆ ಇರುವ ಮಾನದಂಡಗಳು ಯಾವುವು; ಎಷ್ಟು ವಲಯಗಳಾಗಿ ಗುರುತಿಸಲಾಗಿದೆ; ಅವುಗಳಲ್ಲಿ ನಿರ್ಬಂದಿಸಲಾದ ಚಟುವಟಿಕೆಗಳು ಯಾವುವು ; ಈ ಪ್ರದೇಶದಲ್ಲಿ ಅಭಿವೃದ್ಧಿ ಕಾಮಗಾರಿಯನ್ನು ನಡೆಸಲು ನಿರಾಕ್ಷೇಪಣಾ ಪತ್ರವನ್ನು ಪಡೆಯಲು ಅಗತ್ಯವಾದ ದಾಖಲೆ ಮತ್ತು ಹಂತವಾರು ಕ್ರಮಗಳು ಯಾವುವು ; (ವಿವರ ಸುತ್ತೋಲೆಯ ಪ್ರತಿಯನ್ನು ಒದಗಿಸುವುದು)

(ಆ) ಉಡುಪಿ ಜಿಲ್ಲೆಯಲ್ಲಿ ಯಾವ ಗ್ರಾಮಗಳನ್ನು ಸಿ ಆರ್ ಜೆಡ್ ವ್ಯಾಪ್ತಿಯಲ್ಲಿ ಗುರುತಿಸಲಾಗಿರುತ್ತದೆ; ಅವುಗಳಲ್ಲಿ ಸಿ ಆರ್ ಜೆಡ್ ವ್ಯಾಪ್ತಿಗೆ ಒಳಪಡುವ ಸ.ನಂ. ವಾರು ಮತ್ತು ವಿಸ್ತೀರ್ಣವಾರು ಮಾಹಿತಿಯನ್ನು ಒದಗಿಸುವುದು ;

(ಇ) ಸಿ ಆರ್ ಜೆಡ್ ಪ್ರದೇಶವನ್ನು ಗುರುತಿಸುವಲ್ಲಿ ಕಾಂಡ್ಲಾವನವನ್ನು ಮಾನದಂಡವಾಗಿ ಹೊಂದಲಾಗಿದೆಯೇ ; ಉಡುಪಿ ಜಿಲ್ಲೆಯಲ್ಲಿ ನೈಸರ್ಗಿಕವಾಗಿ ಗುರುತಿಸಲಾದ ಕಾಂಡ್ಲಾವನಗಳ ಸಂಖ್ಯೆ ಮತ್ತು ವಿಸ್ತೀರ್ಣ ಎಷ್ಟು ; ಇಲಾಖೆಯಿಂದ ಅಭಿವೃದ್ಧಿಪಡಿಸಿದ ಕಾಂಡ್ಲಾವನಗಳ ಸಂಖ್ಯೆ ಮತ್ತು ವಿಸ್ತೀರ್ಣವೆಷ್ಟು ; ನಿರ್ವಹಣೆಯ ಕೊರತೆಯಿಂದ ನಶಿಸಿ ಹೋಗುತ್ತಿರುವ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹೌದಾದರೆ, ಈ ಬಗ್ಗೆ ಕೈಗೊಂಡ ಕ್ರಮಗಳಾವುವು ?